Appendixನಲ್ಲಿ ವಿಶೇಷ ಅನುದಾನ ಕೊಟ್ಟು, ತೀವ್ರಗತಿಯಲ್ಲಿ ಟೆಂಡರ್ ಕರೆದು ಕಾಮಗಾರಿಗಳನ್ನು ಪ್ರಾರಂಭಿಸಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಚೌಡಾಪುರ – ಹೊಸೂರು ರಸ್ತೆ ಕಾಮಗಾರಿಗಾಗಿ 7 ಕೋಟಿ 50 ಲಕ್ಷ ರೂಪಾಯಿಗಳಿಗೆ ಅನುಮೋದನೆ ಕೊಟ್ಟಿದ್ದು, ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡುವ ಕೆಲಸ ಮಾಡುತ್ತೇವೆ. 7 ರಿಂದ 15 ಕಿ.ಮೀ. ರಸ್ತೆಗೆ ಸಹ 6 ಕೋಟಿ ರೂಪಾಯಿ ಲಭ್ಯವಾಗುತ್ತದೆನ್ನುವುದನ್ನು ಸಹ ಹೇಳಬಯಸುತ್ತೇನೆ. ಅತಿ ಶೀಘ್ರದಲ್ಲಿ ಕೆಲಸ ಮಾಡಿಸುತ್ತೇನೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ : ಅದರ maintenance ಗೆ ಹಣ ಕೊಡಬೇಕು. ಸನ್ಮಾನ್ಯ ಮುಖ್ಯಮಂತ್ರಿಯವರು 2 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದರು. Maintenance ಗೆ ಬಹಳ ತುರ್ತಾಗಿ ಬೇಕಾಗಿದೆ. ಟೆಂಡರ್ ಕರೆದರೆ ಅದಕ್ಕೆ 2 ತಿಂಗಳ ಪ್ರಕ್ರಿಯೆ ಹಿಡಿಯುತ್ತದೆ.

ಅಧ್ಯಕ್ಷರು : Maintenance ಮಾಡುವುದಕ್ಕೆ ಹೇಳಿ.

ಶ್ರೀ ಮಾಲೀಕಯ್ಯ ಏ.ಗುತ್ತೇದಾರ್ : ಆ ರಸ್ತೆ ಬಹಳ ಅಸ್ತವ್ಯಸ್ತವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ. ತಾವೇ ಹೈದರಾಬಾದ್ ವಿಮೋಚನೆ ದಿವಸ ಘೋಷಣೆ ಮಾಡಿದ್ದಿರಿ.

ಶ್ರೀ ಸಿ.ಎಂ. ಉದಾಸಿ : ಟೆಂಡರ್ ಆಗುವವರೆಗೆ ರಸ್ತೆಯನ್ನು motorable ಮಾಡಿ ಇಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ : ಧನ್ಯವಾದಗಳು.

8) ವಿಷಯ : ಹಾಸನ ಜಿಲ್ಲೆಯ ಬೇಲೂರು ಹೊಳೆನರಸೀಪುರ ಪಾಲಿಟೆಕ್ನಿಕ್ ಕಾಲೇಜಿನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಹಣ ಬಿಡುಗಡೆ ಮಾಡದಿರುವುದರಿಂದ ಕಾಲೇಜಿಗೆ ಬೇಕಾದ ಮೂಲಭೂತ ಸೌಕರ್ಯಗಳು ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, **ಹಾಸನ ಜಿಲ್ಲೆಯ** ಬೇಲೂರು ಹೊಳೆನರಸೀಪುರ ಪಾಲಿಟೆಕ್ನಿಕ್ ಕಾಲೇಜಿನ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಹಣ ಬಿಡುಗೆ ಮಾಡದಿರುವುದರಿಂದ ಕಾಲೇಜಿಗೆ ಬೇಕಾದ ಮೂಲಭೂತ ಸೌಕರ್ಯಗಳು ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಮತ್ತು ಮುಜರಾಯಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ,

1. ಬೇಲೂರು ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ಕಾಮಗಾರಿಯ ಟೆಂಡರ್ ಮೊತ್ತ ರೂ. 7.19 ಕೋಟಿ. ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು, ಈವರೆಗೆ ರೂ. 2.38 ಕೋಟಿ ಬಿಡುಗಡೆ ಮಾಡಲಾಗಿದೆ. ಬಾಕಿ ರೂ.4.81 ಕೋಟಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ಸದರಿ ಕಟ್ಟಡ ಕಾಮಗಾರಿಯು ಆಡಳಿತ ಶಾಖೆಗೆ ಮಡ್ಡಿ ಮಾಡುವ ಕೆಲಸ ಪ್ರಗತಿಯಲ್ಲಿದೆ ಹಾಗೂ ವರ್ಕ್‌ಷಾಪ್ ಬ್ಲಾಕ್‌ಗೆ ಬಾಗಿಲು ಮತ್ತು ಕಿಟಕಿ ಜೋಡಣೆ ಕೆಲಸ ಪ್ರಗತಿಯಲ್ಲಿದ್ದು, ಜನವರಿ 2012 ರ ಮಾಹೆಯಲ್ಲಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ರೂ. 1.50 ಕೋಟಿಗಳನ್ನು ಬಿಡುಗಡೆ ಮಾಡಲು ಬಿಲ್ಲುಗಳನ್ನು ಸಲ್ಲಿಸಲಾಗಿದೆ.

ಸದರಿ ಸಂಸ್ಥೆಯಲ್ಲಿ ಒಟ್ಟು 429 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಈ ಸಂಸ್ಥೆಯು ಸರ್ಕಾರಿ ಹಾಗೂ ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದೆ. ಈ ಕಟ್ಟಡದಲ್ಲಿ 9 ತರಗತಿ ಕೊಠಡಿಗಳು, 4 ಪ್ರಯೋಗಾಲಯಗಳು, 7 ಕಾರ್ಯಾಗಾರಗಳು ಹಾಗೂ 1 ಗ್ರಂಥಾಲಯ ಕೊಠಡಿಯಿದ್ದು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಯಾವುದೇ ತೊಂದರೆಯಾಗುತ್ತಿಲ್ಲ.

2. ಹೊಳೆನರಸೀಪುರ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ಕಾಮಗಾರಿಯ ಟೆಂಡರ್ ಮೊತ್ತ ರೂ. 7.68 ಕೋಟಿ ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು, ಈವರೆಗೆ ರೂ. 5.40 ಕೋಟಿ ಬಿಡುಗಡೆ ಮಾಡಲಾಗಿದೆ. ಬಾಕಿ ರೂ. 2.28 ಕೋಟಿಗಳಿಗೆ ಬಿಲ್ಲುಗಳನ್ನು ಸಲ್ಲಿಸಿದ್ದು, ಬಿಡುಗಡೆ ಮಾಡಬೇಕಾಗಿದೆ. ಸದರಿ ಕಟ್ಟಡ ಕಾಮಗಾರಿಯು ಮುಕ್ತಾಯ ಗೊಂಡಿದೆ.

ಈ ಸಂಸ್ಥೆಯಲ್ಲಿ ಒಟ್ಟು 633 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದೆ. ಇದರಲ್ಲಿ 8 ತರಗತಿ ಕೊಠಡಿಗಳು, 3 ಪ್ರಯೋಗಾಲಯ ಕೊಠಡಿಗಳು ಇವೆ. ಈವರೆವಿಗೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ. ಹೊಸ ಕಟ್ಟಡವನ್ನು ಹಸ್ತಾಂತರ ಮಾಡಿಕೊಳ್ಳಲಾಗಿದ್ದು, ಶೀಘ್ರದಲ್ಲಿಯೇ ಸ್ಥಳಾಂತರ ಮಾಡಲಾಗುವುದು.

2011–12ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ಕಾಮಗಾರಿಗಳಿಗೆ ರೂ. 16.75 ಕೋಟಿಗಳ ಅನುದಾನ ಒದಗಿಸಲಾಗಿದೆ. ಹಂತಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಆಧರಿಸಿ ಬಾಕಿ ಬಿಡುಗಡೆ ಮಾಡಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ : ಬೇಲೂರು ಹೊಳೆನರಸೀಪುರ ಪಾಲಿಟೆಕ್ನಿಕ್ ಕಾಲೇಜ್ ಕಟ್ಟಡಗಳ ಕಾಮಗಾರಿ ಮಾಡಿ 5 ವರ್ಷಗಳಾಯಿತು. ಆದರೆ, ಇವತ್ತಿನವರೆಗೆ ಆ ಕೆಲಸ ಮಾಡಿದ ಬಿಲ್ ಕೊಡದೆ ತಾಪತ್ರಯವಾಗಿದೆ. ಸನ್ಮಾನ್ಯ ಹಣಕಾಸು ಸಚಿವರು ಸದನದಲ್ಲಿಯೇ ಇದ್ದಾರೆ. ಆ ಎರಡೂ ಪಾಲಿಟೆಕ್ನಿಕ್ ಕಾಲೇಜ್‌ಗಳಿಗೆ ಏನು ಬಾಕಿ ಹಣ ಬರಬೇಕೋ ಅದನ್ನು ಕೊಟ್ಟು ವಿದ್ಯಾರ್ಥಿಗಳು ಆ ಕಾಲೇಜುಗಳಲ್ಲಿ ಓದುವುದಕ್ಕೆ ಅವಕಾಶ ಮಾಡಿಕೊಡಿ. ಸುಮಾರು 429 ವಿದ್ಯಾರ್ಥಿಗಳು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್, ಹೊಳೆನರಸೀಪುರದಲ್ಲಿ ಪ್ರವೇಶ ಪಡೆದಿದ್ದಾರೆ. 688 ವಿದ್ಯಾರ್ಥಿಗಳು ಬೇಲೂರು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿ ಪ್ರವೇಶ ಪಡೆದಿದ್ದಾರೆ. ಎರಡೂ ಪಾಲಿಟೆಕ್ನಿಕ್ ಕಾಲೇಜ್‌ಗಳಿಗೆ ಕೂಡಲೆ ಹಣ ಬಿಡುಗಡೆ ಮಾಡಬೇಕೆಂದು ತಮ್ಮ ಮೂಲಕ ಸನ್ಮಾನ್ಯ ಹಣಕಾಸು ಸಚಿವರಿಗೆ ಮನವಿ ಮಾಡುತ್ತಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ರೇವಣ್ಣನವರು, ಪುಟ್ಟೇಗೌಡರವರು, ಶಿವಲಿಂಗೇಗೌಡರವರು ಮತ್ತು ಇತರರು ಹಾಸನ ಉಪ ನಿರ್ದೇಶಕರ ಬಗ್ಗೆ ಗಮನ ಸೆಳೆಯುವ ಸೂಚನೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಅದಲ್ಲ, ಇದು ಪಾಲಿಟೆಕ್ನಿಕ್ ಕಾಲೇಜಿನ ಬಗ್ಗೆ ಗಮನ ಸೆಳೆಯುವ ಸೂಚನೆಯಾಗಿದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ರೋಷನ್‌ಬೇಗ್‌ರವರೆ, ನೀವು ಎಷ್ಟು fresh ಆಗಿ ಎಷ್ಟು ಟೈಂಗೆ ಸದನದೊಳಗೆ ಬಂದಿದ್ದೀರಿ ಎಂಬುದನ್ನು ನೋಡಿದ್ದೇನೆ. ನಮಗೆ ಆ ಸ್ಥಿತಿ ಇಲ್ಲ. ನಾನು observe ಮಾಡುತ್ತಿದ್ದೆನೆ. ಈ ಘಟನೆಗಳನ್ನು ನೋಡುತ್ತಿದ್ದಾಗ a hungry man is an angry man ಎಂಬ ಮಾತು ನೆನಪಿಗೆ ಬರುತ್ತದೆ. ಅದಕ್ಕೋಸ್ಕರ, ನಾನು ಮಾನ್ಯ ಸಭಾಧ್ಯಕ್ಷರಿಗೆ ಹೇಳುತ್ತೇನೆ, ಸಿದ್ದರಾಮಯ್ಯನವರಿಗೆ ಹೇಳುತ್ತೇನೆ, raise ಮಾಡಿ, ನಾವು ಕೇಳಿಕೊಂಡು ಉತ್ತರ ಕೊಡುತ್ತೇನೆ. ಆದರೆ, ಯಾವುದೇ ಒಂದು ವಿಚಾರಕ್ಕೆ ಸೂಕ್ತವಾದ ಸಮಯವಿರುತ್ತದೆ. Ultimately it is left to you. ನೀವೂ ಕೂಡ ಇದನ್ನು ಸ್ವೀಕರಿಸಬೇಕು. ಅದಕ್ಕೆ ಒಂದು ಉತ್ತರ ಬರಬೇಕೆಂದರೆ ಸೂಕ್ತವಾಗಿ ನೀವು ವರ್ತಿಸಿ. ವರ್ತಿಸಿ ಎಂದರೆ ನಾನು ಕೇಳುತ್ತಿರುವುದು ಈ ವಿಷಯ ತೆಗೆದುಕೊಳ್ಳಿ. It depends upon you.

ಶ್ರೀ ಹೆಚ್.ಡಿ. ರೇವಣ್ಣ : ನಾನು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಬೇಲೂರು ಮತ್ತು ಹೊಳೆನರಸೀಪುರ ಪಾಲಿಟೆಕ್ನಿಕ್ ಕಾಲೇಜ್‌ಗೆ ಸಂಬಂದಿಸಿದಂತೆ LOC ಹಣ ಕೊಡದೆ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ಕೇಲಿದ್ದೇನೆ ಆದ್ದರಿಂದ ಆ ಪಾಲಿಟೆಕ್ನಿಕ್ ಕಾಲೇಜ್‌ಗಳಿಗೆ ಬಾಕಿ ಹಣ ಕೊಡಬೇಕು ಅಷ್ಟೇ ಬೇರೇನಿಲ್ಲ. Building ಎಲ್ಲ complete ಆಗಿದೆ. ಹಣ ಕೊಟ್ಟು ಹುಡುಗರು ತರಗತಿಗೆ ಹೋಗುವಂತೆ ಅವಕಾಶ ಮಾಡಿಕೊಡಬೇಕು ಅಷ್ಟೆ.

ಶ್ರೀ ಡಿ.ವಿ. ಸದಾನಂದಗೌಡ : ಮಾಹಿತಿ ಇಲ್ಲ. ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಬಿಲ್ ಬಾಕಿ ಇದೆ.

ಶ್ರೀ ಡಿ.ವಿ. ಸದಾನಂದಗೌಡ : ಪರಿಶೀಲನೆ ಮಾಡಿ ಕೂಡಲೇ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಪರಿಶೀಲನೆ ಮಾಡುವುದಲ್ಲ, ಬಿಲ್ ಕೊಟ್ಟರಾಯಿತು, ವಿದ್ಯಾರ್ಥಿಗಳು ಕಾಲೇಜಿಗೆ ಹೋಗುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : Right Sir.

ಅಧ್ಯಕ್ಷರು : ಕೊಡುತ್ತಾರೆ.